Taking up of Irrigation Projects costing more than 10 crores by the Central Government.

*Q.—662. Sri G. V. GOWDA (Palya).—

Will the Government be pleased to state :—

(*a*) whether they have moved the Union Government to take up the Irrigation Projects costing more than Rs. 10 crores for execution by Central Government;

(*b*) if so, the result thereof ?

*A.—Sri S. NIJALINGAPPA (Chief Minister).—

(*a*) No.

(*b*) Does not arise.

Sri H. R. KESHAVAMURTHY.—Can you kindly give the names of works costing more than 10 crores which are to be undertaken in our State ?

†Sri S. NIJALINGAPPA.—I can give some names. They are Ghat prabha, Malaprabha, Haranji, Upper Krishna, etc. Some of these are being investigated. Regarding other schemes, of course Sharavathi is practically over. There are Kalinadi, Cauvery Scheme, Barapole schemes, as far as I can remember.

Sri S. SIVAPPA.—The Chief Minister has time and again said on the Floor of this House and elsewhere that projects in the State costing more than 10 crores should be taken over by the Central Government. The assumption is to the effect that they have moved the Central Government. May I know that are the reasons ?

Sri S. NIJALINGAPPA.—The question is this: wheather this Government has moved the Union Government. This Government has not done anything. I, as a member of the N.D.C. have been often telling this as and when possible.

ಶ್ರೀ ಸಿದ್ದಯ್ಯ ಕಾಶೀಮಠ.—ಬೇರೆ ರಾಜ್ಯಗಳಲ್ಲಿ 10 ಕೋಟಿ ರೂಪಾಯಿ ಮೇಲ್ಪಟ್ಟಕ್ಕಿಂಥ ಯೋಜನೆಗಳನ್ನು ಕೇಂದ್ರ ಸರಕಾರದವರೆ ವಹಿಸಿಕೊಳ್ಳುತ್ತಿದ್ದಾರೆಂದು ಕೇಳಿದ್ದೇನೆ. ಅದೇರೀತಿ ನಮ್ಮ ರಾಜ್ಯದಲ್ಲಿಯೂ 10 ಕೋಟಿಮೇಲೆ ಇರತಕ್ಕಂಥ ಯೋಜನೆಗಳನ್ನು ಕೇಂದ್ರ ಸರಕಾರದವರೆ ವಹಿಸಿಕೊಳ್ಳಬೇಕು ಅಂತ ಒತ್ತಾಯಮಾಡಿ ಹೇಳಿ ಏನಾದರೂ ಒಂದು ರೆಪ್ರೆಸಂಟೇಶನ್ ಕೊಟ್ಟಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲೆಲ್ಲ ಸಾಧ್ಯವೋ ಅಲ್ಲಲ್ಲ ಇರ್ರಿಗೇಶನ್ ಪ್ರಾಜೆಕ್ಟುಗಳ ಬಗ್ಗೆ ಹೀಗೆ ಹೇಳುತ್ತಾ ಇದ್ದೇವೆ. ಅನೇಕ ಎನ್.ಡಿ.ಸಿ. ಮೀಟಿಂಗುಗಳಲ್ಲಿ ನಾನು ಹೇಳುತ್ತಾ ಇದ್ದೇನೆ. ಮತ್ತು ಸಂಬಂಧಪಟ್ಟ ಮಂತ್ರಿಗಳೂ ಹೇಳುತ್ತಾ ಇದ್ದಾರೆ. ಅದೇರೀತಿಯಾಗಿ ಬೇರೆ ರಾಜ್ಯಗಳ ಚೀಫ್ ಮಿನಿಸ್ಟರುಗಳೂ ಒತ್ತಾಯ ಮಾಡುತ್ತಾ ಇದ್ದಾರೆ. ಅದನ್ನು ಇನ್ನೂ ಪಾಲಸಿಯಾಗಿ ಒಪ್ಪಿಕೊಳ್ಳದೆ ಹೋದರೂ, ಬಹುಶಃ ಒಪ್ಪಿಕೊಂಡಿಯಾರು. ಒಂದೊಂದು ರಾಜ್ಯಕ್ಕೆ ಒಂದೊಂದು ಸ್ಕೀಮು ತೆಗೆದುಕೊಳ್ಳಬೇಕೆಂಬ ಅಭಪ್ರಾಯ ಕೊಟ್ಟಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—1974ನೆ ಇಸವಿ ಹೊತ್ತಿಗೆ ಹೇವಾವತಿ, ಹಾರಂಗಿ ಕಂಬದಹಳ್ಳ, ಯಗಚಿ ಪ್ರಾಜೆಕ್ಟುಗಳನ್ನು ಮುಗಿಸಬೇಕಾಗಿರುವುದರಿಂದ ತಾವು ಸೆಂಟ್ರಲ್ ಗವರ್ನ್‌ಮೆಂಟಿನವರನ್ನು ಒತ್ತಾಯಮಾಡುತ್ತೀರಾ-ಈ ಸ್ಕೀಮುಗಳನ್ನು ಅವರೇ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಸಾಕಾವಷ್ಟು ದುಡ್ಡನ್ನು ಪ್ರಾಜೆಕ್ಟುಗಳಿಗೆ ಅವರು ಕೊಡಬೇಕು ಎಂದು ಸ್ಪಷ್ಟವಾಗಿ ಹೇಳುವುದು ಸರಕಾರದ ಕರ್ತವ್ಯವಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಹೇಳುವುದಕ್ಕೆ ಮುಂಚೆ ಈ ಕರ್ತವ್ಯ ಮಾಡಿದ್ದೇವೆ. ಆದರೆ ಅವರೇ ತೆಗೆದುಕೊಳ್ಳಬೇಕೆಂದರೆ, ತೆಗೆದುಕೊಳ್ಳುವುದಿಲ್ಲ. ಸ್ಕೀಮು ನಮ್ಮದು, ಹಣ ನಮ್ಮದು. ಸಾಲ ಕೊಡಿ ಎಂದು ಅವರನ್ನು ಒತ್ತಾಯ ಮಾಡುತ್ತಾ ಇದ್ದೇವೆ. ಅವರ ಸಾಲವನ್ನು ತೀರಿಸುತ್ತೇವೆಂದು ಹೇಳಿದ್ದೇವೆ.

ಶ್ರೀ ಗೋವಾಲ ಸಾವೆನ್ನ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಉತ್ತಮವಾದ ಯೋಜನೆಯನ್ನು ಈ ರೀತಿ ಜಾರಿ ಮಾಡಲಕ್ಕೆ ಆಲೋಚನೆ ಮಾಡಿದ್ದೀರ ?

ಶ್ರೀ ಎಸ್. ನಿಜಲಿಂಗಪ್ಪ.—ನದ್ಯ ಅಲ್ಲಿ ತಯಾರು ಮಾಡತಕ್ಕ ಯೋಜನೆ ಯಾವುದೂ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ಘಟಪ್ರಭಾ, ಮಲಪ್ರಭಾ, ಶರಾವತಿ ಯಾವಯಾವುದೊ ಸ್ಕೀಮುಗಳಿವೆಯೆಂದು ಹೇಳಿದಿರಿ. ಅವುಗಳನ್ನು ಎಷ್ಟು ವರ್ಷದಲ್ಲಿ ಮುಗಿಸುವುದಕ್ಕೆ ತಯಾರಾಗಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಅಪ್ಪರ್ ಕೃಷ್ಣ, ಮಲಪ್ರಭಾ ಶುರುವಾಗಿದೆ. ಘಟಪ್ರಭಾ ಎರಡನೆ ಸ್ಟೇಜು ಪ್ರಾರಂಭವಾಗಿದೆ. ಕಾಳನದಿ ಸ್ಕೀಮು ತಯಾರಾಗಿದೆ. ಆದರೆ ಇಂಥದನ್ನು ಇಷ್ಟೇ ವರ್ಷದಲ್ಲಿ ಮಾಡುತ್ತೇವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಹಣದ ಅಭಾವವಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಫೀಸರುಗಳಿಗೆ ಬಿಲ್ಡಿಂಗುಗಳು, ರಸ್ತೆಗಳು ಮುಂತಾದ್ದನ್ನು ಮಾಡಿದ್ದಾರೆ, ಅಷ್ಟೆ, ಈ ಪ್ರಾಜೆಕ್ಟುಗಳಿಗೆ ಒಟ್ಟಿನಲ್ಲಿ ನಮ್ಮ ರಾಜ್ಯದಲ್ಲಿ ಇಷ್ಟು ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಸಾಧ್ಯವಿದೆ ಮತ್ತು ಇಷ್ಟು ಪ್ರಾಜೆಕ್ಟುಗಳನ್ನು ಇಷ್ಟು ವೇಳೆಯಲ್ಲಿ ಪೂರೈಸುವುದಕ್ಕೆ ಸಾಧ್ಯ ಅನ್ನುವುದನ್ನು ಹೇಳುತ್ತೀರ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರಿಗೆ ತಾರತಮ್ಯ ದೃಷ್ಟಿ ಇಲ್ಲ. ಬಿಲ್ಡಿಂಗ್ ಕಟ್ಟಿಸದೆ ಅಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ; ರಸ್ತೆ ಮಾಡದೆ ಮೆಶಿನರಿಗಳು ಹೋಗುವುದಕ್ಕೆ ಆಗುವುದಿಲ್ಲ. ಅದನ್ನು ಮೊದಲುಮಾಡಿ ಬಾಕೀದು ಆ ಮೇಲೆ ಮಾಡಬೇಕಾಗುತ್ತದೆ. ಅದಕ್ಕೆ ಏನೋ ಅನ್ಯಾಯ ವಾಗಿದೆ ಎಂದು ಊಹೆಗೆ ಒಳಗಾಗಿ ಪ್ರಶ್ನೆ ಹಾಕತಕ್ಕಂಥಾದ್ದು ಆಶ್ಚರ್ಯ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಉದಾಹರಣೆಗೆ, 15 ವರ್ಷದ ಕೆಳಗೇ ಹೇಮಾವತಿ ಪ್ರಾಜೆಕ್ಟು ಸ್ಕೀಮು ತಯಾರುಆಗಿ, ಅದಕ್ಕೋಸ್ಕರ ಕೆಲವು ಬಿಲ್ಡಿಂಗುಗಳನ್ನೂ ಮತ್ತು ಕೆಲವು ರಸ್ತೆಗಳನ್ನು ಮಾತ್ರ ಮಾಡುತ್ತಾ ಇದ್ದಾರೆ. ಇದಕ್ಕೆ ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.—15 ವರ್ಷವಾಗಿಲ್ಲ. ಅವರಿಗೆ ಹೇಮಾವತಿ ಎಲ್ಲಿದೆ ಎಂದು ಗೊತ್ತಿದೆಯೊ ಇಲ್ಲವೋ. ಹೇಮಾವತಿ ನದಿ ಪ್ರಾಜೆಕ್ಟಿಗೆ ಈಗ ಒಂದುವರೆ ವರ್ಷದ ಕೆಳಗೆ ಜಾಗ ಅಕ್ವೈಯರ್ ಮಾಡಿಕೊಂಡಿದ್ದೇವೆ. 15 ವರ್ಷದ ಕೆಳಗೆ ಅಲ್ಲಿ ಯಾವ ಯೋಜನೆಯೂ ಇಲ್ಲ, ಏನೋ ಊಹೆ ಮಾಡಿಕೊಂಡು ಹೇಳುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಇವತ್ತು ನೋಡಿದರೆ ಅಲ್ಲಿ ಎಕ್ಸಿಕ್ಯೂಟೀವ್ ಇಂಜನಿಯರುಗಳಿಷ್ಟು, ಸ್ಟ್ಯಾಫ್‌ಪು ಎಷ್ಟು, ಅದನ್ನು ನೋಡಿ ಕೇಳಿದೆ. ನಮಗೆ ಗೊತ್ತಿಲ್ಲದೆ ಇದ್ದರೆ, ತಿಳಿದುಕೊಳ್ಳುವುದಕ್ಕೆ ನಿಮಗೆ ಪ್ರಶ್ನೆ ಹಾಕಿದರೆ ತಪ್ಪೇನು ? ನಮಗೆ ಗೊತ್ತಿದ್ದರೆ ನಿಮ್ಮನ್ನು ಕೇಳುತ್ತಲೇ ಇರಲಿಲ್ಲ.

Mr. SPEAKER.—He knows geography very well !

Sri S. NIJALINGAPPA.—He is perfectly right; he has to ask because he does not know. It is refreshing frankness on the part of member. ಇವರು ಇಷ್ಟರ ಮಟ್ಟಿಗೆ ಒಪ್ಪಿಕೊಂಡಿದ್ದು ಅತ್ಯಂತ ಸಂತೋಷ ಏನು ಕೇಳಿದರೂ ಹೇಳುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಗೋವಾಲ ಸಾವೆನ್ನ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂಥ ಯೋಜನೆಗಳಿಗೆ ಒಳ್ಳೆಯ ಅವಕಾಶವಿರುವುದರಿಂದ, ನರ್ವೆ ಮಾಡಿಸಿ ಸರಿಯಾದ ಯೋಜನೆ ತಯಾರು ಮಾಡುತ್ತೀರ ?

ಶ್ರೀ ಎಸ್. ನಿಜಲಿಂಗಪ್ಪ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂಥ ಯೋಜನೆಗಳಿಗೆ ಅವಕಾಶವಿಲ್ಲ. ಸಣ್ಣಪುಟ್ಟದಕ್ಕೆ ಅವಕಾಶವಿದೆ, ಅದನ್ನು ಮಾಡಿಸುತ್ತೇವೆ.

ಶ್ರೀ ನಂಜೀವನಾಥ ಐಕಳ.—ನೇತ್ರಾವತಿ ನದಿಗೆ ಅಡ್ಡಲಾಗಿ, ಭೃಗು ನದಿ, ಹತ್ತಿರ ಮುಂಗಳೂರು ತಾಲ್ಲೂಕು ಬಳ್ತಂಗಡಿ ಹತ್ತಿರ, ಪೂರ್ವ ಭಾಗದಲ್ಲಿ ಕಾಲುವೆ ಹಾಕಿ ಸೇರಿಸುವಂಥ ಯೋಜನೆಯನ್ನು ತಯಾರು ಮಾಡುತ್ತೀರ ? ಅದಕ್ಕೋಸ್ಕರ 10 ಕೋಟಿ ರೂಪಾಯಿನ ಒಂದು ಸ್ಕೀಮನ್ನು ಪರಿಶೀಲನೆ ಮಾಡುತ್ತೀರ ! ಅದು ಫ್ಲಡ್ ಕಂಟ್ರೋಲಿಗೂ ಅನುಕೂಲವಾಗುತ್ತದೆ.

ಶ್ರೀ ಎಸ್. ನಿಜಲಿಂಗಪ್ಪ.—ಪರಿಶೀಲಿಸೋಣ.

Mr. SPEAKER.—Question hour is over.